ಅ) ಸುಮಾರು 8 ರಿಂದ 12 ಸಾವಿರ

ಇ) ಸುಮಾರು ಪ್ರತಿ ತಿಂಗಳಿಗೆ 3 ರಿಂದ 5 ಲಕ್ಷ ರೂ.ಗಳು

ಈ) ಮಹಾನಗರ ಪಾಲಿಕೆಯಿಂದ ಅನಧಿಕೃತ ನೀರಿನ ಸಂಪರ್ಕಗಳನ್ನು ಅಧಿಕೃತಗೊಳಿಸಲು ದಿನಾಂಕ : 8-1-98 ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿ ಅಧಿಕೃತಗೊಳಿಸಿಕೊಳ್ಳಲು ಸಾರ್ವಜನಿಕ ಪ್ರಕಟಣೆಯನ್ನು ದಿನಾಂಕ 4-2-98, 31-3-98 ಹಾಗೂ 26-12-98, 8-2-99 ರಂದು ಕೊಡಲಾಗಿದೆ. ಸಕ್ರಮಗೊಳಿಸುವ ಪ್ರತಿಕ್ರಿಯೆ ಪ್ರಾರಂಭವಾಗಿರುತ್ತದೆ.

ಉ) 1) ಭಾಗ್ಯಜಲದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ (1) ಜಾತಿ ಪ್ರಮಾಣ ಪತ್ರ (2) ಮನೆ ಅವರ ಹೆಸರಿನಲ್ಲಿರುವ ದೃಢೀಕರಣ ಪತ್ರ ಅಂದರೆ ಕಂದಾಯ ಕಟ್ಟಿರುವ ಪ್ರತಿ.

2) ಹಿಂದುಳಿದ ವರ್ಗ ಮತ್ತು ಕಡು ಬಡವರಿಗೆ

1) ಅರ್ಜಿ

2) ಆದಾಯ ದೃಢೀಕರಣ ಪತ್ರ

3) ಸ್ವಂತ ಮನೆ ಹೊಂದಿರುವಂತೆ ದಾಖಲಾತಿ.

ಮೈಸೂರಿನಲ್ಲಿರುವ ಜರ್ಮನ್ ಪ್ರೆಸ್ ಬಳಿ ಇರುವ ನೆಲಸಂಪು ಕಾಮಗಾರಿ.

840(1255) ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) :— ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಜರ್ಮನ್ ಪ್ರೆಸ್ ಬಳಿ ಇರುವ ನೆಲಸಂಪು ಎಷ್ಟು ವಿಸ್ತೀರ್ಣವುಳ್ಳದ್ದಾಗಿದೆ? ಈ ನೆಲಸಂಪಿನ ಕಾಮಗಾರಿಗಳು ಯಾವ ಹಂತದಲ್ಲಿದೆ? ಇದುವರೆವಿಗೂ ಪೂರ್ಣಗೊಳ್ಳದಿರಲು ಕಾರಣವೇನು?

2. ಜರ್ಮನ್ ಪ್ರೆಸ್ ನೆಲಸಂಪಿನ ಮೂಲಕ ರಾಘವೇಂದ್ರನಗರ, ವಿದ್ಯಾನಗರ, ಗಿರಿಯಾ ಬೋವಿ ಪಾಳ್ಯ, ಗಾಯಿತ್ರಿಪುರಂ ಜಲಪುರಿ, ಕ್ಯಾತಮಾರನಹಳ್ಳಿ ಹಾಗೂ ಉದಯಗಿರಿ ಬಡಾವಣೆಗಳಿಗೆ ಪೈಪ್‌ಗಳನ್ನು ಅಳವಡಿಸುವ ಕೆಲಸ ಗುತ್ತಿಗೆದಾರರಿಂದ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

4. ಸಿದ್ಧಾರ್ಥ ನಗರ ಬಡಾವಣೆಯ ಬಾಡಿಗಾರ್ಡ್ ಲೈನ್ಸ್ (ಜಾಕಿ ಕ್ವಾರ್ಟರ್ಸ್)ಗಳಿಗೆ ಮತ್ತೊಂದು ಪೈಪ್ ಲೈನ್ ಅಳವಡಿಸುವ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ.

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :—

1. ಜರ್ಮನ್ ಪ್ರೆಸ್ ಬಳಿ ಇರುವ ನೆಲಸಂಪು 3462 ಚ.ಮೀ. ವಿಸ್ತೀರ್ಣ ಉಳ್ಳದ್ದಾಗಿರುತ್ತದೆ. ಇದರ ಸಾಮರ್ಥ್ಯವು 41.56 ಮಿಲಿಯನ್ ಲೀಟರ್ಸ್ ಆಗಿರುತ್ತದೆ. ಸದರಿ ಕಾಮಗಾರಿ ಮುಕ್ತಾಯದ ಹಂತದಲ್ಲಿದೆ.

ಈ ಕಾಮಗಾರಿಯನ್ನು ಶ್ರೀ ಮಸಣ ಶೆಟ್ಟಿ ಎಂಬ ಗುತ್ತಿಗೆದಾರರಿಗೆ ವಹಿಸಲಾಗಿತ್ತು. ಇವರು ನಿಗದಿತ ಅವಧಿಯಲ್ಲಿ ಕೆಲಸ ಮುಗಿಸದಿದ್ದರಿಂದ, ಇವರ ಗುತ್ತಿಗೆಯನ್ನು ರದ್ದುಗೊಳಿಸಿ ಸದರಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲಾಯಿತು. ಬಾಕಿ ಕೆಲಸದ ಗುತ್ತಿಗೆಯನ್ನು ಮೆ:ರಾಮಯ್ಯ ಅಂಡ್ ಕಂಪನಿ, ಇವರಿಗೆ ಗುತ್ತಿಗೆ ಅಧಾರದ ಮೇಲೆ ವಹಿಸಲಾಯಿತು. ಈ ಗುತ್ತಿಗೆದಾರರೂ ಸಹ ನಿಗಧಿತ ಕಾಲದಲ್ಲಿ ಕಾಮಗಾರಿಯನ್ನು ಮುಗಿಸದಿದ್ದರಿಂದ, ಇವರ ಗುತ್ತಿಗೆಯನ್ನು ರದ್ದುಗೊಳಿಸಿ, ಸದರಿ ಗುತ್ತಿಗೆದಾರರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲಾಯಿತು. ಬಾಕಿ ಕೆಲಸದ ಗುತ್ತಿಗೆಯನ್ನು ಮೆ: ನಾಗರಾಜ್ ಅಂಡ್ ಅಸೋಸಿಯೇಟ್ಸ್ ಇವರಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಿದ್ದು ಹಾಲಿ ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ. ಏಪ್ರಿಲ್ 30ಕ್ಕೆ ಕಾಮಗಾರಿಯು ಪೂರ್ಣಗೊಳ್ಳುತ್ತದೆ.

2. ಬಂದಿದೆ.

3. ಈ ಕೊಳವೆ ಮಾರ್ಗವು ಗುರುತ್ವಾಕರ್ಷಕ ಕೊಳವೆ ಮಾರ್ಗವಾಗಿರುವುದರಿಂದ, ಯರಗನಹಳ್ಳಿ ಬಳಿ ವಿದ್ಯಾನಗರ ರಸ್ತೆಯಲ್ಲಿ ಕೊಳವೆ ಮಾರ್ಗವನ್ನು 2 ರಿಂದ 2.75 ಮೀ. ಆಳದಲ್ಲಿ ಸ್ವಲ್ಪ ದೂರದವರೆಗೆ ಆಳವಡಿಸಬೇಕಾಗಿರುತ್ತದೆ. ಈ ಭಾಗದಲ್ಲಿ ಗಟ್ಟಿಕಲ್ಲು ಸಿಕ್ಕಿರುವುದರಿಂದ ಕಾಮಗಾರಿ ಕುಂಠಿತವಾಗಿರುತ್ತದೆ. ಇದಲ್ಲದೆ ಹ್ಯಾತಮಾರನಹಳ್ಳಿಯ ಒಳಗಡೆ ಹಾಕುತ್ತಿದ್ದ ಕೊಳವೆ ಮಾರ್ಗವನ್ನು ಪಕ್ಕದ ರಸ್ತೆಯಲ್ಲಿ ಆಳವಡಿಸಬೇಕೆಂದು ಒತ್ತಾಯಿಸಿ, ಬಡಾವಣೆಯ ಕೆಲವರು ಕಾಮಗಾರಿಯನ್ನು ಕೈಗೊಳ್ಳಲು ಅವಕಾಶ ನೀಡುತ್ತಿಲ್ಲ. ಸ್ಥಳೀಯರೊಂದಿಗೆ ಸಮಸ್ಯೆಯನ್ನು ಬಗೆಹರಿಸಲು ಸಂಧಾನ ನಡೆಸಿ, ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಈ ಕಾಮಗಾರಿ ಬಹುತೇಕ ಪೂರ್ಣಗೊಂಡಿದ್ದು ಬನ್ನೂರು, ಯರಗನ ಹಳ್ಳಿ ರಸ್ತೆಗಳು, ಕೂಡುವಲ್ಲಿ 15 ಮೀ. ಸಿಐ ಪೈಪ್‌ಲೈನು ಅಳವಡಿಸುವ ಕೆಲಸ ಮಾತ್ರ ಉಳಿದಿದ್ದು ಈ ಕೆಲಸ ಪ್ರಗತಿಯಲ್ಲಿದೆ. ಈ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.